# ಕಲಾ ಉತ್ಸವ ಸಮಿತಿ

## ಮಹಾ ಪೋಷಕರು

**ಶ್ರೀ ಗುಂಡಪ್ಪಗೌಡ**
ಗೌ|| ಅಧ್ಯಕ್ಷರು
ವಿದ್ಯಾವರ್ಧಕ ಸಂಘ(ರಿ)
ಮೈಸೂರು

**ಶ್ರೀ ಪಿ. ವಿಶ್ವನಾಥ್**
ಗೌ|| ಕಾರ್ಯದರ್ಶಿಗಳು
ವಿದ್ಯಾವರ್ಧಕ ಸಂಘ(ರಿ)
ಮೈಸೂರು

**ಶ್ರೀ ಶ್ರೀಶೈಲರಾಮಣ್ಣವರ್**
ಗೌ|| ಕೋಶಾಧ್ಯಕ್ಷರು
ವಿದ್ಯಾವರ್ಧಕ ಸಂಘ(ರಿ)
ಮೈಸೂರು

## ಪೋಷಕರು

**ಶ್ರೀ ಟಿ. ನಾಗರಾಜು**
ಅಧ್ಯಕ್ಷರು
ಕಾಲೇಜು ನಿರ್ವಹಣಾ ಮಂಡಳಿ

**ಡಾ. ಎಸ್. ಮರೀಗೌಡ**
ಪ್ರಾಂಶುಪಾಲರು

## ಸಮಿತಿ ಸದಸ್ಯರು

**ಪ್ರೊ. ಮೋಹನ್‌ಕುಮಾರ್. ಎನ್**
ಸಂಚಾಲಕರು, ಕಲಾ ಸಂಭ್ರಮ-2019
9986867321

**ಡಾ. ಬಿ.ಟಿ. ರಘು**
ಅಧ್ಯಾಪಕ ಸಲಹೆಗಾರರು
9880475024

**ಪ್ರೊ. ಆರ್. ಸಿದ್ದರಾಜು**
ಸಹ ಪ್ರಾಧ್ಯಾಪಕರು
ಅರ್ಥಶಾಸ್ತ್ರ ವಿಭಾಗ
8073158562

**ಪ್ರೊ. ಎನ್. ಗೀತಾ**
ಸಹ ಪ್ರಾಧ್ಯಾಪಕರು
ವಾಣಿಜ್ಯಶಾಸ್ತ್ರ ವಿಭಾಗ
9036095954

## ವಿದ್ಯಾರ್ಥಿ ಸಂಚಾಲಕರು

**ಸಚಿನ್. ಎಂ.ಎಸ್**
ಅಂತಿಮ ಬಿ.ಎ
9900782846

**ಅರ್ಪಿತ. ಆರ್**
ಅಂತಿಮ ಬಿ.ಎ
9242230072

**ರವಿ. ಎನ್**
ಅಂತಿಮ ಬಿ.ಎ
9945206364

**ಚೈತ್ರ. ಸಿ.ಎನ್**
ಅಂತಿಮ ಬಿ.ಎ
6364575426

**ರಕ್ಷಿತ್. ಹೆಚ್.ಸಿ**
ದ್ವಿತೀಯ ಬಿ.ಬಿ.ಎ
7760756978

**ಶ್ರೀನಿವಾಸ್ ಪ್ರಸಾದ್. ಸಿ**
ಅಂತಿಮ ಬಿ.ಕಾಂ.
9448945618

### ಸೂಚನೆಗಳು

1. ಚರ್ಚಾ ಸ್ಪರ್ಧೆಯಲ್ಲಿ ಇಬ್ಬರು ಸ್ಪರ್ಧಿಗಳನ್ನೊಳಗೊಂಡ ಪ್ರತೀ ತಂಡಕ್ಕೆ ರೂ. 100 ನೋಂದಣಿ ಶುಲ್ಕವಿರುತ್ತದೆ.
2. ಭಾವಗೀತೆ ಗಾಯನ ಸ್ಪರ್ಧೆಗೆ ಪ್ರತಿ ತಂಡಕ್ಕೆ ರೂ. 100 ನೋಂದಣಿ ಶುಲ್ಕವಿರುತ್ತದೆ.
3. ವಿದ್ಯಾರ್ಥಿಗಳು ತಮ್ಮ ಕಾಲೇಜಿನಿಂದ ಅನುಮತಿ ಪತ್ರ ಮತ್ತು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕು.
4. ದಿನಾಂಕ : 14-09-2019ರ ಒಳಗೆ ನೋಂದಣಿ ಮಾಡಿಕೊಳ್ಳತಕ್ಕದ್ದು.

Global Ads

ವಿದ್ಯಾವರ್ಧಕ ಸಂಘ (ರಿ), ಮೈಸೂರು

# ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು

ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು-570001



# ಕಲಾ ಸಂಭ್ರಮ-2019

**ರಾಜ್ಯ ಮಟ್ಟದ ಅಂತರ ಕಾಲೇಜುಗಳ ಕಲಾ ಉತ್ಸವ**

ದಿನಾಂಕ 14-09-2019, ಶನಿವಾರ

## ವಿದ್ಯಾವರ್ಧಕ ಸಂಘ (ರಿ)

ಐತಿಹಾಸಿಕ ಪಾರಂಪರಿಕ ನಗರಿಯಾದ ಮೈಸೂರಿನ ನೆಲದೊಡಲಿನ ಶಿಕ್ಷಣರಂಗದ ಪ್ರತಿಷ್ಠಿತ ವಿದ್ಯಾಸಂಸ್ಥೆ ವಿದ್ಯಾವರ್ಧಕ ಸಂಘ(ರಿ)ವು ದಾರ್ಶನಿಕರು ಮತ್ತು ಶಿಕ್ಷಣ ತಜ್ಞರಾದ ದಿ||ಶ್ರೀ.ಕೆ.ಪುಟ್ಟಸ್ವಾಮಿರವರು ಮತ್ತು ಲೋಕೋಪಕಾರಿಗಳಾದ ದಿ||ಶ್ರೀ.ಸಾಹುಕಾರ ಚೆನ್ನಯ್ಯರವರ ನೇತೃತ್ವದಲ್ಲಿ 1949ರಲ್ಲಿ ಸ್ಥಾಪನೆಗೊಂಡಿತು. ಬಡಮಕ್ಕಳ ವಿದ್ಯಾರ್ಜನೆಗಾಗಿ ಪ್ರೌಢಶಾಲೆಯಿಂದ ಆರಂಭಗೊಂಡು ಇಂದು ಶಾಲಾ ಪೂರ್ವ ಶಿಕ್ಷಣವನ್ನು ಮೊದಲುಗೊಂಡು ಶಾಲಾ ಶಿಕ್ಷಣವು ಸೇರಿದಂತೆ ತಾಂತ್ರಿಕ ಶಿಕ್ಷಣ, ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ಕೇಂದ್ರದವರೆಗೆ ಬೆಳೆದು ಬಂದಿದೆ.

## ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು

ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು 1978ರಲ್ಲಿ 37 ವಿದ್ಯಾರ್ಥಿಗಳಿಂದ ಆರಂಭವಾಗಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಮೌಲ್ಯಾಧಾರಿತ ಶಿಕ್ಷಣ ನೀಡುತ್ತಾ ಬಂದಿದೆ. ಇಂದು ಬಿಬಿಎ, ಬಿ.ಕಾಂ ಮತ್ತು ಬಿಎ ವಿಭಾಗಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ವಿದ್ಯಾರ್ಜನೆ ಗೈಯುತ್ತಿದ್ದಾರೆ. ಕಾಲೇಜು ಸಮರ್ಥವಾದ ಬೋಧನಾಂಗ ಹಾಗೂ ಕಾರ್ಯಾಂಗವನ್ನು ಹೊಂದಿದೆ. ಕರ್ನಾಟಕ ಸರ್ಕಾರದಿಂದ ಮಾನ್ಯತೆಪಡೆದಿರುವ ನಮ್ಮ ಕಾಲೇಜು ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದಿಂದ 12(ಬಿ) ಹಾಗೂ 2(ಎಫ್) ದೃಢೀಕರಣ ಪತ್ರ ಪಡೆದಿದೆ. 2011-12ನೇ ಶೈಕ್ಷಣಿಕ ಸಾಲಿನಲ್ಲಿ ವಾಣಿಜ್ಯಶಾಸ್ತ್ರ ಸ್ನಾತಕೋತ್ತರ (ಎಂ.ಕಾಂ.) ವಿಭಾಗವನ್ನು ಆರಂಭಿಸಲಾಗಿದೆ. ಸಂಶೋಧನಾ ಕಾರ್ಯದಲ್ಲಿ ಹೆಚ್ಚಿನ ಅನುಕೂಲವಾಗಲೆಂದು 2013-14ನೇ ಶೈಕ್ಷಣಿಕ ಸಾಲಿನಿಂದ ವಿದ್ಯಾವರ್ಧಕ ಸಂಶೋಧನಾ ಪ್ರತಿಷ್ಠಾನವನ್ನು ಸಹ ಪ್ರಸ್ತುತ ಕಾಲೇಜಿನಲ್ಲಿ ಪ್ರಾರಂಭಿಸಲಾಗಿದ್ದು, ಇದರಿಂದ ಹಲವಾರು ವಿದ್ಯಾರ್ಥಿಗಳು ವಾಣಿಜ್ಯಶಾಸ್ತ್ರ ಮತ್ತು ನಿರ್ವಹಣಾ ಶಾಸ್ತ್ರದ ವಿಷಯಗಳಲ್ಲಿ, ಪಿ.ಹೆಚ್.ಡಿ. ಪಡೆದಿದ್ದಾರೆ. ಹಾಗೂ 12ಕ್ಕೂ ಹೆಚ್ಚು ಮಂದಿ ಪಿ.ಹೆಚ್.ಡಿ. ಸಂಶೋಧನೆ ಕೈಗೊಂಡಿದ್ದಾರೆ. ನ್ಯಾಕ್ ಮಾನ್ಯತೆಯನ್ನು 2004, 2011 ಹಾಗೂ 2018ನೇ ಸಾಲುಗಳಲ್ಲಿ ಪಡೆದಿರುತ್ತದೆ.

## ಕಲಾ ಸಂಭ್ರಮ

ಜಾಗತೀಕರಣ ಹಾಗೂ ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆಯಿಂದಾಗಿ ದೇಶೀಯ ಕಲೆ ಹಾಗೂ ಸಂಸ್ಕೃತಿಗಳು ನಶಿಸಿ ಹೋಗುತ್ತಿರುವ ಈ ಸಂದರ್ಭದಲ್ಲಿ ನಮ್ಮ ದೇಶೀಯ ಕಲೆಯನ್ನು ಪ್ರೋತ್ಸಾಹಿಸುವ ವೇದಿಕೆಯೇ ಈ ನಮ್ಮ ಕಲಾ ಸಂಭ್ರಮ.

ಈ ಸಾಂಸ್ಕೃತಿಕ ಹಬ್ಬವನ್ನು ಪ್ರತೀ ವರ್ಷ ಬೆಸ ಚಾತುರ್ಮಾಸ ಅಧ್ಯಯನದ ಅವಧಿಯಲ್ಲಿ ಕೈಗೊಳ್ಳುತ್ತಿದ್ದೇವೆ. ಕಳೆದ ಸಾಲಿನಿಂದ ಈ ಕಾರ್ಯಕ್ರಮವನ್ನು ರಾಜ್ಯ ಮಟ್ಟಕ್ಕೆ ವಿಸ್ತರಿಸಲಾಗಿದೆ. ಪದವಿ ಕಾಲೇಜುಗಳಲ್ಲಿ ವ್ಯಾಸಂಗಮಾಡುತ್ತಿರುವ ವಿದ್ಯಾರ್ಥಿಗಳು ಈ ಕಲಾ ಸಂಭ್ರಮದಲ್ಲಿ ನಡೆಸುವ ಕನ್ನಡ ಚರ್ಚಾ ಸ್ಪರ್ಧೆ ಮತ್ತು ಭಾವಗೀತೆ ಗಾಯನ ಸ್ಪರ್ಧೆಗಳಲ್ಲಿ ಭಾಗವಹಿಸಬಹುದು.

ಕಲಾ ಸಂಭ್ರಮದ ಮೂಲ ಮಂತ್ರ - ಕಲೆಯೇ ಬದುಕಿನ ಭಾವಲಹರಿ

## ಸ್ಪರ್ಧೆಗಳು

ದಿನಾಂಕ 14-09-2019 ರ ಶನಿವಾರ

**ಚರ್ಚಾ ಸ್ಪರ್ಧೆಯ ವಿಷಯ**

**"ಪ್ರಕೃತಿಯ ಮೇಲಿನ ಮಾನವನ ಆಕ್ರಮಣವೇ ನೈಸರ್ಗಿಕ ವಿಪತ್ತುಗಳಿಗೆ ಕಾರಣ"**

ಇಬ್ಬರು ಸ್ಪರ್ಧಿಗಳು ಭಾಗವಹಿಸುವುದು
(ಪರ ಮತ್ತು ವಿರೋಧ)

ದಿನಾಂಕ 14-09-2019 ರ ಶನಿವಾರ

**ಭಾವಗೀತೆ ಗಾಯನ ಸ್ಪರ್ಧೆ**

(ಇಬ್ಬರು ಸ್ಪರ್ಧಿಗಳು ಭಾಗವಹಿಸುವುದು)

### ಸಮಯ ಪೂರ್ವಾಹ್ನ 11.00 ಗಂಟೆಗೆ

ಎರಡೂ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ
ವಿಜೇತರಾದವರಿಗೆ ಪಾರಿತೋಷಕ, ಪ್ರಶಸ್ತಿ ಪತ್ರ ಹಾಗೂ
ಪ್ರಥಮ ಬಹುಮಾನ ರೂ. 5,000/-
ದ್ವಿತೀಯ ಬಹುಮಾನ ರೂ. 3,000/-
ತೃತೀಯ ಬಹುಮಾನ ರೂ. 2,000/- ನೀಡಲಾಗುವುದು